ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 409
2) ಸದಸ್ಯರ ಹೆಸರು : ಶ್ರೀ ಎನ್.ಎಲ್.ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್)
3) ಉತ್ತರಿಸಬೇಕಾದ ದಿನಾಂಕ : 29/07/2008
4) ಉತ್ತರಿಸಬೇಕಾದ ಸಚಿವರು : ಮುಖ್ಯ ಮಂತ್ರಿಗಳು

ಅ) ಮುಖ್ಯಮಂತ್ರಿಗಳು ವಿವೇಚನಾ ಕೋಟಾ ಪ್ರವರ್ಗದಡಿ ಬಿಡಿ ನಿವೇಶನ ಹಂಚಿಕೆಗೆ ಮಾಡಲು ಮಾರ್ಗಸೂಚಿ ಏನು;

ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ /129/ಬೆಂಆಸೇ/ 97, ದಿನಾಂಕ 06/08/97ರ ಪರಿಷ್ಕೃತ ಮಾರ್ಗಸೂಚಿಯಂತೆ ಜಿ ಪ್ರವರ್ಗದಡಿ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ.

ಆ) ಸರ್ಕಾರದ ಸುತ್ತೋಲೆ ಸಂಖ್ಯೆ:ಯಡಿಡಿ/ಎಂಎನ್‌ಜಿ/97–06/08/97ರ ವಿವರವೇನು;

ಅನುಬಂಧದಲ್ಲಿ ವಿವರಿಸಲಾಗಿದೆ.

ಇ) ಈ ಸುತ್ತೋಲೆಯ ಮಾರ್ಪಾಟು ಆಗಿದ್ದಲ್ಲಿ ವಿವರ ಒದಗಿಸುವುದು;

ಸರ್ಕಾರದ ದಿನಾಂಕ 06/08/97ರ ಪರಿಷ್ಕೃತ ಮಾರ್ಗಸೂಚಿಯು ಇಂದಿಗೂ ಸಹ ಚಾಲ್ತಿಯಲ್ಲಿರುತ್ತದೆ.

ಈ) ಈ ಸುತ್ತೋಲೆಯಂತೆ ಇದರಲ್ಲಿ ಎಷ್ಟು ಪ್ರವರ್ಗಗಳಿವೆ (ವಿವರ ಒದಗಿಸುವುದು);

ಏಳು ಪ್ರವರ್ಗಗಳಿವೆ. (ಅನುಬಂಧದಲ್ಲಿ ವಿವರಿಸಿದೆ)

ಉ) ಪ್ರತಿ ಪ್ರವರ್ಗದಡಿ ಬಿಡಿ ನಿವೇಶನ ಹಂಚಿಕೆ ಮಾಡಲು ಮಾನದಂಡವೇನು?

ಸರ್ಕಾರದ ದಿನಾಂಕ:06/08/97ರ ಪರಿಷ್ಕೃತ ಮಾರ್ಗಸೂಚಿಯಲ್ಲಿ ವಿವರಿಸಿರುವಂತೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (409)240
2) ಸದಸ್ಯರ ಹೆಸರು : ಶ್ರೀ ನರೇಂದ್ರ ಬಾಬು ಎನ್.ಎಲ್. (ಮಹಾಲಕ್ಷ್ಮಿ ಲೇಔಟ್)
3) ಉತ್ತರಿಸಬೇಕಾದ ಸಚಿವರು : (ಶ್ರೀ ಬಿ.ಎಸ್.ಯಡಿಯೂರಪ್ಪ) ಮುಖ್ಯ ಮಂತ್ರಿಗಳು

ಅ) 2004ರ ನಂತರ ಅಸ್ಥಿತ್ವಕ್ಕೆ ಬಂದ ಸರ್ಕಾರದ ಮುಖ್ಯಮಂತ್ರಿಗಳ ವಿವೇಚನಾ ಕೋಟಾ ಜಿ ಪ್ರವರ್ಗದಡಿ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆಯೇ;

ಹೌದು

ಆ) ಮಾಡಲಾಗಿದ್ದರೆ, ಹಂಚಿಕೆ ಮಾಡಲಾಗಿರುವ ನಿವೇಶನಗಳ ಸಂಖ್ಯೆ ಎಷ್ಟು; ಹೆಸರು ಸಹಿತ ವಿವರ ನೀಡುವುದು;

361 ವ್ಯಕ್ತಿಗಳಿಗೆ ನಿವೇಶನ ಹಂಚಿಕೆ ಮಾಡಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ಪ್ರತ್ಯೇಕವಾಗಿ ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು)

ಇ) ಬಿಡಿ ನಿವೇಶನ ಹಂಚಿಕೆ ಮಾಡಲ್ಪಟ್ಟ ವ್ಯಕ್ತಿಗಳು ಸಾರ್ವಜನಿಕ ಸೇವೆಯಲ್ಲಿರುವ ಗಣ್ಯ ವ್ಯಕ್ತಿಗಳೇ; ವಿವರ ಒದಗಿಸುವುದು;

ದಿನಾಂಕ:6-8-1997ರ ಪರಸ್ಕೃತ ಮಾರ್ಗಸೂಚಿಯನ್ವಯ ಸರ್ಕಾರ ನಿರ್ದೇಶನ ನೀಡುವ ಸಾರ್ವಜನಿಕ ಜೀವನಗಳ ವ್ಯಕ್ತಿಗಳಿಗೆ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ.

ಈ) ಬಿಡಿ ನಿವೇಶನ ಹಂಚಿಕೆ ಮಾಡಲ್ಪಟ್ಟ ವ್ಯಕ್ತಿಗಳು ತಮಗೆ ಅಥವಾ ತಮ್ಮ ಕುಟುಂಬದ ಅವಲಂಬಿತರಿಗೆ ಸ್ವಂತ ನಿವೇಶನ/ ಮನೆ ಇಲ್ಲ ಎಂದು ಸ್ವ-ಪ್ರಮಾಣ ಪತ್ರ ನೀಡಿದ್ದಾರೆಯೇ;

ಹೌದು

ಉ) ನೀಡಿದ್ದರೆ, ವಿವರ ಒದಗಿಸಲಾಗುವುದೇ?

ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿ ಕೋರಿದ್ದಲ್ಲಿ ಒದಗಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(191)242**
ಮಾನ್ಯ ಸದಸ್ಯರ ಹೆಸರು	:	**ಶ್ರೀ ಪ್ರತಾಪಗೌಡ ಪಾಟೀಲ್(ಮಸ್ಕಿ)**
ಉತ್ತರಿಸುವ ಸಚಿವರು	:	**(ಶ್ರೀ ಸಿ.ಎಂ.ಉದಾಸಿ)**
	:	**ಮಾನ್ಯ ಲೋಕೋಪಯೋಗಿ ಸಚಿವರು**

ಅ) ಬೀದರ – ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯಲ್ಲಿ ಬರುವ ಮಸ್ಕಿ ಗ್ರಾಮದ ಹಿರೆನಾಲಾದ (ಬ್ರಿಡ್ಜ್) ಸೇತುವೆ ಸಂಪೂರ್ಣ ಕೊಚ್ಚಿ ಹೋಗಿದ್ದು ಇದರ ಪುನರ್ ನಿರ್ಮಾಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಬೀದರ – ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿ ಕಿ.ಮೀ.445ರ (ಮಸ್ಕಿ ಹತ್ತಿರ) ಇರುವ ಹಾಲಿ ಸೇತುವೆಯ ಕಳೆದ ವರ್ಷ ಬಿದ್ದ ಭಾರಿ ಮಳೆಯಿಂದಾಗಿ ಕೊಚ್ಚಿಕೊಂಡು ಹೋಗಿರುವುದರಿಂದ ಹೊಸ ಸೇತುವೆಯ ನಿರ್ಮಾಣದ ಅವಶ್ಯಕತೆ ಇದೆ.

ಪ್ರಸ್ತುತ ಈ ಸೇತುವೆ ಕಾಮಗಾರಿಯು ಯಾವುದೇ ಯೋಜನೆಯಡಿ ಸೇರ್ಪಡೆಯಾಗಿರುವುದಿಲ್ಲ. ಆದರೂ ರಾಯಚೂರು ಲೋಕೋಪಯೋಗಿ ಇಲಾಖೆ ವಿಭಾಗ ವ್ಯಾಪ್ತಿಯಲ್ಲಿ ಈಗಾಗಲೇ ಅನುಮೋದನೆ ಯಾಗಿರುವ ಮತ್ತು ಸದ್ಯಕ್ಕೆ ತುರ್ತು ನಿರ್ಮಾಣದ ಅಗತ್ಯವಿಲ್ಲದಿರುವ ಸೇತುವೆ/ಸೇತುವೆಗಳ ಬದಲಾಗಿ ಸದರಿ